# Gent University initiate India Platform

Prajavani: Kannada Daily dated 03 November 2012

PRAJAVANI 3.11.2012

## ಗೆಂಟ್ ವಿವಿಯಿಂದ 'ಭಾರತೀಯ ವೇದಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಲ್ಜಿಯಂ ದೇಶದ ಗೆಂಟ್ ವಿಶ್ವವಿದ್ಯಾಲಯವು ಉನ್ನತ ಶಿಕ್ಷಣವೂ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರಕ್ಕಾಗಿ ಭಾರತೀಯ ವೇದಿಕೆಯನ್ನು ಹುಟ್ಟುಹಾಕಿದ್ದು, ಅದರೊಂದಿಗೆ ರಾಜ್ಯದ ವಿಶ್ವವಿದ್ಯಾಲಯಗಳು ಹಾಗೂ ಇತರ ಸಂಸ್ಥೆಗಳು ಒಡಂಬಡಿಕೆ ಮಾಡಿಕೊಳ್ಳುವ ಪ್ರಕ್ರಿಯೆಗೆ ರಾಜ್ಯಪಾಲ ಹಂಸರಾಜ ಭಾರದ್ವಾಜ್ ಶನಿವಾರ ಚಾಲನೆ ನೀಡಲಿದ್ದಾರೆ.

ಗೆಂಟ್ ವಿವಿಯ ನಿರ್ದೇಶಕ ಡಾ. ಎಸ್.ಎನ್. ಬಾಲಗಂಗಾಧರ (ಬಾಲು) ಶುಕ್ರವಾರ ಪತ್ರಿಕಾ ಗೋಷ್ಠಿಯಲ್ಲಿ ಈ ವಿಷಯ ಪ್ರಕಟಿಸಿದರು. 'ರಾಜಭವನದಲ್ಲಿ ಬೆಳಿಗ್ಗೆ 11ಕ್ಕೆ ಈ ಕಾರ್ಯಕ್ರಮ ನಡೆಯಲಿದೆ' ಎಂದ ಅವರು, ನಗರದ ಎಂ.ಎಸ್. ರಾಮಯ್ಯ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಭಾರತೀಯ ವೇದಿಕೆ ಕಚೇರಿಯನ್ನು ತೆರೆಯಲಾಗಿದೆ' ಎಂದು ಹೇಳಿದರು.

'ರಾಷ್ಟ್ರೀಯ ಕಾನೂನು ಶಾಲೆ, ಕರ್ನಾಟಕ ಪಶುವೈದ್ಯಕೀಯ, ಪ್ರಾಣಿ ಮತ್ತು ಮೀನುಗಾರಿಕಾ ವಿವಿ, ಬೆಂಗಳೂರು ಮತ್ತು ಧಾರವಾಡದ ಕೃಷಿ ವಿವಿಗಳು ಒಡಂಬಡಿಕೆ ಮಾಡಿಕೊಳ್ಳಲಿವೆ' ಎಂದ ಅವರು, 'ಈ ಒಡಂಬಡಿಕೆಯಿಂದ ಆರೋಗ್ಯ, ವೈದ್ಯಕೀಯ ವಿಜ್ಞಾನ, ಆರ್ಥಿಕ ವ್ಯವಹಾರ, ಮಾಧ್ಯಮಿಕ ಶಿಕ್ಷಣ, ನಗರ ಯೋಜನೆ, ಕೃಷಿ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರಕ್ಕೆ ಅವಕಾಶ ಒದಗಲಿದೆ' ಎಂದು ಅವರು ತಿಳಿಸಿದರು.

'ಕರ್ನಾಟಕ ರಾಜ್ಯ ಕಾನೂನು ವಿವಿ ಮತ್ತು ಗೋಕುಲ ಶಿಕ್ಷಣ ಸಂಸ್ಥೆ ಈ ವೇದಿಕೆ ಸೇರಿದ ದಕ್ಷಿಣ ಭಾರತದ ಮೊದಲ ಶೈಕ್ಷಣಿಕ ಸಂಸ್ಥೆಗಳಾಗಿವೆ. ಡಿಸೆಂಬರ್‌ವರೆಗೆ ಇನ್ನೂ ಹಲವು ವಿವಿಗಳ ಜೊತೆ ಒಡಂಬಡಿಕೆ ಮಾಡಿಕೊಳ್ಳಲಾಗುತ್ತದೆ. ಬರುವ ಮಾರ್ಚ್‌ನಿಂದ ಶೈಕ್ಷಣಿಕ ಯೋಜನೆಗಳು ಆರಂಭವಾಗುತ್ತವೆ' ಎಂದು ಹೇಳಿದರು.

'ಪ್ರತಿವರ್ಷ 120 ವಿದ್ಯಾರ್ಥಿಗಳಿಗೆ ಶಿಷ್ಯವೇತನ, 50 ಉಪನ್ಯಾಸಕರಿಗೆ ಫೆಲೋಷಿಪ್ ಸಿಗಲಿದ್ದು, ಯುರೋಪ್‌ನಲ್ಲಿ ಪಿಎಚ್‌ಡಿ ಮಾಡಲು ಬಯಸುವವರಿಗೆ ಅಧ್ಯಯನಕ್ಕೆ 36 ತಿಂಗಳ ಅವಕಾಶ ಒದಗಿಸಲಾಗುತ್ತದೆ. ಯಾವುದೇ ಮೀಸಲಾತಿ ಸೌಲಭ್ಯ ಈ ಯೋಜನೆಗೆ ಸಿಗುವುದಿಲ್ಲ. ಪ್ರತಿಭೆಯೊಂದೇ ಮಾನದಂಡವಾಗಿದೆ' ಎಂದು ವಿವರಿಸಿದರು.

'ಭಾರತೀಯ ವೇದಿಕೆಯಿಂದ ಸದಸ್ಯತ್ವ ಪಡೆದುಕೊಂಡ ಎಲ್ಲ ಸಂಸ್ಥೆಗಳು ನಿರ್ದಿಷ್ಟ ಮೊತ್ತವನ್ನು ವೇದಿಕೆ ಕಾರ್ಯಗಳಿಗಾಗಿ ಎತ್ತಿಡಬೇಕು. ಯೋಜನೆಗಳನ್ನು ಅನುಷ್ಠಾನಕ್ಕೆ ತರುವಾಗ ಆ ಹಣವನ್ನು ಖರ್ಚು ಮಾಡಬೇಕು ಎಂಬ ನಿಯಮ ವಿಧಿಸಲಾಗಿದೆ' ಎಂದು ಮಾಹಿತಿ ನೀಡಿದರು. 'ಚೀನಾ ಮತ್ತು ಆಫ್ರಿಕಾ ವೇದಿಕೆಗಳನ್ನು ಗೆಂಟ್ ವಿವಿಯಿಂದ ಸ್ಥಾಪಿಸಲಾಗಿದೆ' ಎಂದು ಹೇಳಿದರು.

'ಭಾರತೀಯ ವೇದಿಕೆ ಜೊತೆಗಿನ ಒಪ್ಪಂದದಿಂದ ನಮ್ಮ ಸಂಸ್ಥೆಗೆ ಇನ್ನಷ್ಟು ಶೈಕ್ಷಣಿಕ ಸೌಕರ್ಯಗಳು ಸಿಗಲಿವೆ' ಎಂದು ಗೋಕುಲ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಂ.ಆರ್. ಜಯರಾಂ ತಿಳಿಸಿದರು.

ಗೆಂಟ್ ವಿವಿಯ ಉಪ ಕುಲಪತಿ ಪ್ರೊ. ಪೌಲ್ ವ್ಯಾನ್ ಕೌವೆನ್‌ಬರ್ಗ್, ಮುಖ್ಯ ಶೈಕ್ಷಣಿಕ ಅಧಿಕಾರಿ ಡಾ. ಕೋಯಿನ್ ಗೋಥಾಲ್ಸ್, ಬೆಲ್ಜಿಯಂ ಸರ್ಕಾರಿ ಆಯುಕ್ತ ಯನಿಕ್ ಡಿ. ಕ್ಲರ್ಕ್, ಗೋಕುಲ ಶಿಕ್ಷಣ ಸಂಸ್ಥೆಯ ಕಾರ್ಯ ನಿರ್ವಹಣ ಅಧಿಕಾರಿ ಡಾ.ಡಿ.ವಿ.ಗುರುಪ್ರಸಾದ್ ಹಾಜರಿದ್ದರು.

# Belgian Institute to join local initiative

DNA: English Daily dated 03 November 2012

6 BANGALORE
SATURDAY, NOVEMBER 3, 2012 DNA

## Belgian institute to join local initiative

DNA Correspondent
BANGALORE

Ghent University, a top Belgian institute, has decided to become a stakeholder of the newly unveiled India Platform. The move is being seen as a bid to make establish communication channels between higher education institutions in India and Europe.

A Ghent University delegation that included the rector, Prof Van Cauwenberge and chief academic officer, Koen Goethhals besides Prof Balagangadhara, a faculty member at Ghent University who will also be the founding director of India Platform, visited MS Ramaiah Institute on Friday in connection with the India Platform. MS Ramaiah Institute will also be part of the platform.

The platform will find institutes working together in various fields of research. On November 3, the institute will also enter into an agreement with the University of Agricultural Sciences, Bangalore, University of Agricultural Sciences, Dharwad, the National Law School of India, Amrita University, Karnataka Veterinary, animal and Fisheries University and Valdel Group. At the European end, the University of Pardubice Czech Republic), University of Groningen (Netherlands) and University of Aveiro (Portugal) have also signed on to the platform.

According to Balagangadhara, the final stakeholders list will be finalised by December.

"By the end of December, we want to get all the MoUs signed and by March next year, various departments of different institutes will meet and decide on how and in what areas they would like to collaborate," he said.

The budget of the platform has not been fixed yet as it depends on the stakeholders. "Each institute has to put aside 40,000 Euros per year for a period of five years for work to be done through this platform. This includes exchange programmes, research collaborations and seminars. It is up to them on how they spend the money," he added.

Van Cauwenberge said he was impressed with the quality of institutes he had seen in India. "We are the only institute from Belgium to be part of this platform. We are looking forward to our staff having contacts with Indian institutes in the field of Engineering, Bio-Engineering and Medicine among others," he said.

According to Balagangadhara, the platform would focus on areas through which India and Europe could establish mutual contact with each other.

inbox@dnaindia.net

# Gent University and Ramaiah organizations collaborate

Samyukta Karnataka: Kannada Daily dated 03 November 2012



## ಘೆಂಟ್ ವಿವಿ ಜತೆ ರಾಮಯ್ಯ ಸಂಸ್ಥೆ ಒಪ್ಪಂದ

**ಬೆಂಗಳೂರು, ನ. 2:** ಗೋಕುಲ ಶಿಕ್ಷಣ ಪ್ರತಿಷ್ಠಾನದ ಎಂ.ಎಸ್.ರಾಮಯ್ಯ ಶಿಕ್ಷಣ ಸಂಸ್ಥೆ ಯುರೋಪ್‌ನ ಘೆಂಟ್ ವಿಶ್ವವಿದ್ಯಾನಿಲಯದ ಭಾರತೀಯ ವೇದಿಕೆ ಜೊತೆ ಉನ್ನತ ಶಿಕ್ಷಣ, ವೈಜ್ಞಾನಿಕ ಸಂಶೋಧನೆ ಮತ್ತು ಉತ್ತಮ ಗುಣಮಟ್ಟದ ಆರೋಗ್ಯ ಸೇವೆ ಒದಗಿಸಲು ಒಪ್ಪಂದಕ್ಕೆ ಸಹಿ ಹಾಕಿದೆ.

ಪತ್ರಿಕಾಗೋಷ್ಠಿಯಲ್ಲಿ ಈ ಒಪ್ಪಂದದ ಕುರಿತು ಮಾಹಿತಿ ನೀಡಿದ ಗೋಕುಲ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಎಂ.ಆರ್.ಜಯರಾಮ್ ಉನ್ನತ ಶಿಕ್ಷಣ, ಸಂಶೋಧನೆ, ಆರೋಗ್ಯ, ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ನೂತನ ಸಂಶೋಧನೆ ಕೈಗೊಳ್ಳಲು ಈ ಒಪ್ಪಂದ ಸಹಾಯಕವಾಲಿದೆ ಎಂದು ಭರವಸೆ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಈ ಒಪ್ಪಂದಕ್ಕೆ ಮೊದಲು ಸಹಿ ಮಾಡಿದ್ದು, ಎಂ.ಎಸ್.ರಾಮಯ್ಯ ಶಿಕ್ಷಣ ಸಂಸ್ಥೆ. ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು, ರಾಷ್ಟ್ರೀಯ ಕಾನೂನು ಶಾಲೆ ಭಾರತ, ಕರ್ನಾಟಕ ಪಶುವೈದ್ಯ ಮತ್ತು ಪ್ರಾಣಿ, ಮೀನುಗಾರಿಕೆ ವಿಶ್ವವಿದ್ಯಾನಿಲಯ ನ.3ರಂದು ರಾಜಭವನದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಹೊಸದಾಗಿ ಭಾರತೀಯ ವೇದಿಕೆಗೆ ಸೇರಲಿವೆ ಎಂದರು.

ಗೋಕುಲ್ ಶಿಕ್ಷಣ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಗೋಕುಲ್ ಪ್ರಸಾದ್ ಮಾತನಾಡಿ, ಘೆಂಟ್ ವಿಶ್ವವಿದ್ಯಾನಿಲಯ ಯುರೋಪ್ ಮತ್ತು ವಿವಿಧ ದೇಶಗಳ ನಡುವಿನ ಸಂಶೋಧನೆ, ತಾಂತ್ರಿಕ ವಿಷಯಗಳ ವಿನಿಮಯಕ್ಕಾಗಿ ಭಾರತ, ಚೀನಾ, ಆಫ್ರಿಕಾ ವಲಯಗಳನ್ನು ಸ್ಥಾಪಿಸಿದೆ.

ಘೆಂಟ್ ವಿವಿಯಲ್ಲಿ ಪ್ರೊಫೆಸರ್ ಆಗಿರುವ ಡಾ.ಎಸ್.ಎನ್.ಬಾಲಗಂಗಾಧರ ಭಾರತೀಯ ವೇದಿಕೆಯ ಅಧ್ಯಕ್ಷರಾಗಿರುತ್ತಾರೆ. ಎಂ.ಎಸ್.ರಾಮಯ್ಯ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಭಾರತೀಯ ವೇದಿಕೆಯ ಪ್ರಾದೇಶಿಕ ಕಚೇರಿ ಆರಂಭವಾಗಲಿದೆ ಎಂದರು.

ಒಪ್ಪಂದದ ಮೂಲಕ 120 ಜನ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸೇರಿದಂತೆ, ಘೆಂಟ್ ವಿಶ್ವವಿದ್ಯಾನಿಲಯದಲ್ಲಿ ಉನ್ನತ ವ್ಯಾಸಂಗ ಮಾಡುವ ಅಭ್ಯರ್ಥಿಗಳಿಗೆ 36 ತಿಂಗಳ ಅವಧಿಯ ವಿಶೇಷ ಸ್ಕಾಲರ್‌ಶಿಪ್ ದೊರೆಯಲಿದೆ. ಫಲಾನುಭವಿಗಳನ್ನು ಯುರೋಪ್‌ನ ಸಮಿತಿಯೇ ಆಯ್ಕೆ ಮಾಡಲಿದೆ ಎಂದು ತಿಳಿಸಿದರು.

ಘೆಂಟ್ ವಿಶ್ವವಿದ್ಯಾನಿಲಯದ ಉಪ ಕುಲಪತಿ ಪ್ರೊ.ಪೌಲ್ ವ್ಯಾನ್ ಕೌವೆನ್‌ಬರ್ಗ್, ಬೆಲ್ಜಿಯಂ ಸರ್ಕಾರಿ ಆಯುಕ್ತ ಯುನ್ನಿಕ್ ಡಿ ಕ್ಲೆರಿಕ್, ಮುಖ್ಯ ಶೈಕ್ಷಣಿಕ ಅಧಿಕಾರಿ ಡಾ.ಕೋಯಿನ್ ಗೋಥಾಲ್ಸ್ ಮುಂತಾದವರನ್ನು ಒಳಗೊಂಡ ತಂಡ ದೇಶದ ವಿವಿಧ ರಾಜ್ಯಗಳ ವಿಶ್ವವಿದ್ಯಾನಿಲಯಗಳಿಗೆ ಭೇಟಿ ನೀಡಿ, ಭಾರತೀಯ ವೇದಿಕೆ ಜೊತೆ ಕೈ ಜೋಡಿಸಲು ಮನವಿ ಮಾಡಿದ್ದರು. ಪ್ರಸ್ತುತ ಕರ್ನಾಟಕದ ಐದು ವಿವಿಗಳು ಈ ಒಪ್ಪಂದಕ್ಕೆ ಸೇರ್ಪಡೆಗೊಳ್ಳಲಿವೆ ಎಂದು ಹೇಳಿದರು.

ಭಾರತೀಯ ವೇದಿಕೆಯ ಅಧ್ಯಕ್ಷ ಡಾ.ಎಸ್.ಎನ್.ಬಾಲಗಂಗಾಧರ, ಘೆಂಟ್ ವಿವಿಯ ಉಪ ಕುಲಪತಿ ಪ್ರೊ.ಪೌಲ್ ವ್ಯಾನ್ ಕೌವೆನ್‌ಬರ್ಗ್, ಬೆಲ್ಜಿಯಂ ಸರ್ಕಾರಿ ಆಯುಕ್ತ ಯುನ್ನಿಕ್ ಡಿ ಕ್ಲೆರಿಕ್ ಈ ಸಂದರ್ಭದಲ್ಲಿ ಹಾಜರಿದ್ದರು.

**ಯುರೋಪ್‌ನ ಘೆಂಟ್ ವಿಶ್ವವಿದ್ಯಾನಿಲಯದ ಭಾರತೀಯ ವೇದಿಕೆ ಜೊತೆ ಎಂ.ಎಸ್.ರಾಮಯ್ಯ ಶಿಕ್ಷಣ ಸಂಸ್ಥೆ ಮಾಡಿಕೊಂಡಿರುವ ಒಪ್ಪಂದದ ಕುರಿತು ಭಾರತೀಯ ವೇದಿಕೆಯ ಅಧ್ಯಕ್ಷ ಡಾ.ಎಸ್.ಎನ್.ಬಾಲಗಂಗಾಧರ ಮಾಹಿತಿ ನೀಡಿದರು. ಘೆಂಟ್ ವಿವಿಯ ಉಪ ಕುಲಪತಿ ಪ್ರೊ.ಪೌಲ್ ವ್ಯಾನ್ ಕೌವೆನ್‌ಬರ್ಗ್, ಬೆಲ್ಜಿಯಂ ಸರ್ಕಾರಿ ಆಯುಕ್ತ ಯುನ್ನಿಕ್ ಡಿ ಕ್ಲೆರಿಕ್, ಗೋಕುಲ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಎಂ.ಆರ್.ಜಯರಾಮ್ ಈ ಸಂದರ್ಭದಲ್ಲಿ ಹಾಜರಿದ್ದರು.**

# MoU between Europe Universities and India Platform

Andra Jyothi: Telugu Daily dated 03 November 2012

 ANDRA JYOTHI

## ఇండియా ప్లాట్‌ఫాంతో నేడు ఐరోపా యూనివర్సిటీల కీలక ఒప్పందం

**ఆంధ్రజ్యోతి, బెంగళూరు:** ఉపాధ్యాయుల్లో మరింత నైపుణ్యం పెంచి విద్యా ప్రమాణాలను మెరుగుపరిచేందుకు ఐరోపాలోని పలు యూనివర్శిటీలతో ఇండియా ప్లాట్‌ఫాం కీలక ఒప్పందం కుదర్చుకోబోతున్నది. రాజ్‌భవన్‌లో గవర్నర్ హంసరాజ్ భరద్వాజ్ సమక్షంలో శనివారం ఇందుకు సంబంధించిన ఒప్పంద పత్రాలపై సంతకాలు జరుగనున్నాయి. బెల్జియంలోని 200 సంవత్సరాల పురాతన విశ్వ విద్యాలయమైన ఘెంట్ యూనివర్శిటీ రెక్టార్ ప్రొ.పౌల్ వ్యాన్ కౌవెన్‌బర్గ్, బెల్జియం ప్రభుత్వ కమిషనర్ యన్నిక్ డీక్లరిక్, ముఖ్య విద్యాధికారి డా.కోయిన్ గోథాల్స్, గోకుల ఎడ్యుకేషన్ ఫౌండేషన్ అధ్యక్షుడు ఎం.ఆర్.జయరాం వీటి వివరాలను నగరంలో శుక్రవారం మీడియా సమావేశంలో ప్రకటించారు. ఎం.ఎస్.రామయ్య విద్యాసంస్థల ప్రాంగణంలో ఆరు ప్రముఖ కర్ణాటక విశ్వ విద్యాలయాలు ఇండియా ప్లాట్‌ఫాం పేరిట ఒక ప్రత్యేక వేదికను ఏర్పాటు చేసిన సంగతి తెలిసిందే. సామాజిక విజ్ఞానం, మానవీయత, ఆరోగ్య సేవలు, వ్యవసాయం, ప్రకృతి, నగర పథకాల సాంకేతికత, పాలన అనే అంశాలపై ఐరోపా యూనివర్శిటీలతో కలసి పరస్పరం సహకారం అందచేసుకోవాలని తీర్మానించాయి. ఇందులో భాగంగానే ఈ ఒప్పందాలు జరుగనున్నాయని ఇండియా ప్లాట్‌ఫాం డైరెక్టర్ ప్రొ.బాలగంగాధర వివరించారు. గోకుల ఎడ్యుకేషన్ ఫౌండేషన్‌తోపాటు యూనివర్శిటీ ఆఫ్ అగ్రికల్చరల్ సైన్సెస్, నేషనల్ లాస్కూల్ యూనివర్శిటీ ఆఫ్ ఇండియా, కర్ణాటక స్టేట్ లా యూనివర్శిటీ, అమృత యూనివర్శిటీ, కర్ణాటక వెటర్నరీ యానిమల్, ఫిషరీస్ యూనివర్శిటీ, ఇండియా ప్లాట్‌ఫాంలో సభ్యులుగా ఉన్నాయి. ఈ ఒప్పందం దరిమిలా భారతదేశానికి చెందిన 120 మంది విద్యార్థులు, 50 మంది లెక్చరర్లు ఐరోపా యూనివర్శిటీలలో 36 నెలలపాటు ప్రత్యేక శిక్షణ పొందే అవకాశం లభిస్తుంది. ఐరోపా ఇంటర్నేషనల్ బోర్డ్ ఆఫ్ స్క్రూటినీ మెరిట్ ప్రాతిపదకన విద్యార్థులను ఎంపిక చేయనుందన్నారు. ఉన్నత విద్యా ప్రమాణాలు పాదుకొల్పేందుకు, సాంకేతిక రంగంలో పరస్పరం సహకరించుకునేందుకు ఈ ఒప్పందం దోహదపడనుందని చెప్పారు. మీడియా సమావేశంలో యూరోపియన్ ప్రతినిధులు అలెగ్జాండర్, ప్రాంతీయ సమన్వయాధికారి సందీప్‌కుమార్ శెట్టి, ఫ్రెంచ్ విశ్వ విద్యాలయ సమన్వయ అధికారి జెర్సన్, గోకుల ఎడ్యుకేషన్ ఫౌండేషన్ సిఇఓ గురుప్రసాద్, ఎంఎస్ఆర్ఐటి ప్రిన్సిపాల్ కులకర్ణి పాల్గొన్నారు.



విలేఖరులకు వివరాలు వెల్లడిస్తున్న దృశ్యం

# Belgian delegation in city for collaborative education

Deccan Herald: English Daily dated 05 November 2012



## Belgian delegation in City for collaborative education

BANGALORE: A delegation from Ghent University in Belgium is in the City to include well-known universities from Karnataka in its plan to promote education and knowledge sharing in the region.

The Universities of Agricultural Sciences in Bangalore and Dharwad, National Law School University of India, Amrita University, Karnataka Veterinary, Animal and Fisheries University and Vaidel Group will sign stakeholder agreements with India Platform, an organisation established in 2008 by the foreign university for the purpose of facilitating academic collaboration. Governor H R Bhardwaj will host the signing ceremony at Raj Bhavan on Saturday.

According to India Platform, the relationship will be on a 'people-to-people' basis rather than on 'institution-to-institution' basis and the main areas of co-operation will be in social sciences and humanities, medical sciences and medical care, agriculture and environment, urban planning and engineering and business and management.

DH News Service